**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ. ಸಂಖ್ಯೆ: 802/2025**

ಪಿರ್ಯಾದಿ : ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸ್ ಠಾಣೆ,
ಮೂಡಿಗೆರೆ.

ವಿರುದ್ಧ

ಆರೋಪಿ : ಪ್ರಜ್ವಲ್ ಪಿ.ಕೆ. ಯಾನೆ ಪ್ರಜ್ಜು,
ವಯಸ್ಸು ಸುಮಾರು 22 ವರ್ಷ,
ಬಿನ್ ಕೃಷ್ಣ, (ಎಫ್.ಎಂ.ಬಿ. ಸರ್ವಿಸ್
ಹೆರಿಟೇಜ್ ರೆಸಾರ್ಟ್ ಗಾಳಿಬೀಡು ಗ್ರಾಮ)
ವಾಸ: ಗಾಳಿಬೀಡು ಗ್ರಾಮ, ಮಣ್ಣನ್ಗೆರೆ ಅಂಚೆ,
ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ.

**ದೋಷಾರೋಪಣೆ**

ಶ್ರೀಮತಿ ಸುರಕ್ಷ ಕೆ.ಕೆ., C/C ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆ:-

ದಿನಾಂಕ: 03.08.2023 ರಂದು ರಾತ್ರಿ 11-30 ರ ಸಮಯದಲ್ಲಿ ಮೂಡಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಮೂಡಿಗೆರೆ ತಾಲ್ಲೂಕು ಕೃಷ್ಣಾಪುರ ಗ್ರಾಮದ ಮಹೇಶ್ ರವರ ಬಾಬ್ತು ವಾಸದ ಮನೆಯ ಪೈಕಿ ಬಲಭಾಗದಲ್ಲಿ ಚಾಸಾ-1 ರವರು ಬಾಡಿಗೆಗೆ ವಾಸವಿರುವ ಮನೆಯ ಒಳಗಿನ ಮುಂದಿನ ಹಾಲ್‌ನ ಚೇರ್ ನಲ್ಲಿ ಚಾಸಾ-1 ರವರು ಕುಳಿತಿರುವಾಗ ಆರೋಪಿಯಾದ ನೀವು ನಿಮ್ಮ ಬಾಬ್ತು ಸುಸ್ಥಿತಿಯಲ್ಲಿರುವ ಶಿಯೋಮಿ ಕಂಪನಿಯ ರೆಡ್ಮಿ 9 ಮಾದರಿಯ ಆಂಡ್ರಾಯ್ಡ್ ಮೊಬೈಲ್ ಸಿಮ್-1, 868384050849313 ಮತ್ತು ಸಿಮ್-2, 868384050849321 ರಲ್ಲಿ Instagram and Facebook ಗಳನ್ನು instal ಮಾಡಿಕೊಂಡು instagram ಅಕೌಂಟ್ ಐಡಿ Hindu Samrajya Mudigere ka 18 ರಲ್ಲಿ ಗೌರವಾನ್ವಿತ ರಾಜ್ಯದ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳ ವಿರುದ್ಧವಾಗಿ "ತಿಥಿ ಕಾರ್ಡ್ ಎಂದು ಇರುವ ಅದರ ಕೆಳಭಾಗದಲ್ಲಿ ಮಾನ್ಯಮಂತ್ರಿಗಳಾದ ಸಿದ್ದರಾಮಯ್ಯರವರ ಭಾವಚಿತ್ರ ಹಾಗೂ ಅದರ ಕೆಳಭಾಗದಲ್ಲಿ ಜನನ 03 ಆಗಸ್ಟ್ 1947, ನಿಧನ ಜೂನ್-18-2023 ಇವರ ವಿಧಿ ವಿಧಾನವನ್ನು ಶ್ರೀ ಗುರುಕೃಪ ಮೋಕ್ಷಧಾಮ ಕೆಳಗಿನ ದಿನಾಂಕದಂದು ಶುಕ್ರವಾರ ದಿನಾಂಕ: 04.08.2023 ರಂದು ಸಮ್ಮಸಗಿಯಲ್ಲಿ ವೈಕುಂಠ ಸಮಾರಾಧನೆಯನ್ನು ಮಾಡಲಾಗುವುದು," ಮತ್ತು "ಭಾವಪೂರ್ಣ ಶ್ರದ್ಧಾಂಜಲಿ ಎಂದು ಶೀರ್ಷಿಕೆ ಇರುವ ಸಿದ್ದರಾಮಯ್ಯ ರವರ ಭಾವಚಿತ್ರವನ್ನು ಅದರ ಕೆಳಭಾಗದಲ್ಲಿ ಶ್ರದ್ಧಾಂಜಲಿ ಕೋರುವವರು ಸಮಸ್ತ ಬಜರಂಗದಳ ಕಾರ್ಯಕರ್ತರು," ಹಾಗೇ "ಭಾವಪೂರ್ಣ ಶ್ರದ್ಧಾಂಜಲಿ ಶಿರ್ಷಿಕೆ ಇರುವ ಅದರ ಕೆಳಗೆ ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ರವರ ಭಾವ ಚಿತ್ರವಿರುವ ಅದರ ಕೆಳಭಾಗದಲ್ಲಿ ಶ್ರದ್ಧಾಂಜಲಿ ಕೋರುವವರು ಸಮಸ್ತ ಬಜರಂಗದಳ ಕಾರ್ಯಕರ್ತರು" ಮತ್ತು "ಯಾರಿಗೆ ಯಾರು

ಇಲ್ಲ ಗುರು ಇನ್ಮುಂದೆ ಆಟ ಶುರು" ಎಂದು ಶೀರ್ಷಿಕೆ ಅಡಿಯಲ್ಲಿ ತಲವಾರುಗಳು ಮತ್ತು ಚೂರಿಗಳು ಇರುವ ವಿಡಿಯೋ ಇರುವ ಸದರಿ ಪೋಸ್ಟರ್ ಗಳನ್ನು ಅವಹೇಳನಕಾರಿಯಾಗಿ ಅಪ್ ಲೋಡ್ ಮಾಡಿರುವುದು ಮತ್ತು Facebook ಅಕೌಂಟ್ Prajwal Prajju ಹೆಸರಿನ ಐಡಿಯಲ್ಲೂ ಸಹಾ ಈ ಮೇಲ್ಕಂಡ ಪೋಸ್ಟ್ ರ್ ಇರುವ ವಿಡಿಯೋಗಳನ್ನು Reels ನಲ್ಲಿ ಅಪ್ ಲೋಡ್ ಮಾಡಿ ವರ್ಗಗಳ ನಡುವೆ ವೈರ, ದ್ವೇಷ ಅಥವಾ ವೈಮನಸ್ಯದ ಭಾವನೆಗಳನ್ನು ಅಥವಾ ಬೆಳೆಸುವ ಸಂಭವವಿರುವ ವದಂತಿಯನ್ನು Instagram and Facebook ಗಳಲ್ಲಿ ಪೋಸ್ಟರ್ ಪ್ರಸಾರ ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **505(2)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಪ್ರ: 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ**?** ಅವುಗಳು ನಿಮಗೆ ಅರ್ಥವಾಯಿತೇ**?**
ಆರೋಪಿಯ ಉತ್ತರ:

ಪ್ರ: 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ**?**
ಆರೋಪಿಯ ಉತ್ತರ:

**(**ಆರೋಪಿಗೆ ದಿನಾಂಕ 17.02.2026 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ**,** ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು**.** ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ**)**

**Sd/-**

ಮೂಡಿಗೆರೆ
ದಿನಾಂಕ: 17.02.2026

C/C ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.